**ದಿನಾಂಕಃ 21/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಆರೋಪಿತರ ಪರ ಶ್ರೀ ಕೆ ಬಿ ಎಸ್ ವಕೀಲರಿಂದಃ**

1. ನಾನು 2 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಬ್ಯಾಂಕ್ ವ್ಯವಹಾರದ ಬಗ್ಗೆ ಸ್ವಲ್ಪ ತಿಳಿದುಕೊಂಡಿದ್ದೇನೆ. ನಾನು ಬೆಟ್ಟದಪುರದ ಕೆನರಾ ಬ್ಯಾಂಕ್ ಮತ್ತು ಚಪ್ಪರದಹಳ್ಳಿಯ ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ಸದರಿ ಬ್ಯಾಂಕುಗಳ ಸ್ಟೇಟ್ ಮೆಂಟ್ ಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ.

2. ನನ್ನ ಪಿರ್ಯಾದಿ ಮತ್ತು ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಗೊತ್ತು. ನಾನು ಚೀಟಿ ವ್ಯವಹಾರ ಮಾಡುವುದಿಲ್ಲ. ನಾನು ಆದಾಯ ತೆರಿಗೆ ಪಾವತಿಸುವುದಿಲ್ಲ, ಕಾರಣ ನಾನು ಕೃಷಿಕ. ನನ್ನ ಮತ್ತು ನನ್ನ ಕುಟುಂಬದ ವಾರ್ಷಿಕ ಆದಾಯ ಸುಮಾರು 6-7 ಲಕ್ಷ. ಸದರಿ ಆದಾಯವು ನನ್ನ ಕೃಷಿ ಮತ್ತು ಹೈನುಗಾರಿಕೆ ಹಾಗೂ ತಂದಾಕು ಲೈಸೆನ್ಸ್ ನಿಂದ ಬರುತ್ತದೆ. ನಮ್ಮ ಮನೆಯ ಮಾಸಿಕ ಖರ್ಚು ರೂ. 2-3 ಸಾವಿರ. ನಾನು ಹೊಗೆಸೊಪ್ಪು, ಅಡಿಕೆ, ತೆಂಗು, ಬಾಳೆ, ರಾಗಿ ಮತ್ತು ಕಿರಾಣಿ ಪದಾರ್ಥಗಳನ್ನು ಬೆಳೆಯುತ್ತೇನೆ. ನನಗೆ 3 ಎಕರೆ ಜಮೀನು ಇದೆ. ನಾನು ಅಡಿಕೆ ಬೆಳೆಯನ್ನು ಸ. ನಂ. 241 ರ 1 ಎಕರೆ 24 ಗುಂಟೆಗೆ ಬೆಳೆದಿದ್ದೇನೆ. ನಾನು ಅಡಿಕೆಯ ಜೊತೆಗೆ ಬಾಳೆ ಹಾಗೂ ತೆಂಗನ್ನು 1 ಎಕರೆ 24 ಗುಂಟೆಯಲ್ಲಿ ಬೆಳೆದಿದ್ದೇನೆ.

(ಮುಂದುವರೆದ ಪಾಟೀಸವಾಲನ್ನು ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**